# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 18, ರಾಧಾಕೃಷ್ಣ ದೇವಸ್ಥಾನ.

ಸಂಖ್ಯೆ: ಸ.ಅ/ವಾ-18/ಪಿ.ಆರ್/09/2020-21 ದಿನಾಂಕ:05-01-2021

## ವಾರ್ಡ್ ಸಮಿತಿ ಸಭೆಯ ನಡವಳಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020-21 ದಿನಾಂಕ:21-09-2020. ರವರ ಆದೇಶದಂತೆ ದಿನಾಂಕ: 02-01-2021 ರಂದು ವಾರ್ಡ್ ನಂ:18, ರಾಧಾಕೃಷ್ಣ ದೇವಸ್ಥಾನ ವಾರ್ಡ್ ಸಮಿತಿ ಸಭೆಯ ನಡವಳಿಗಳು.

:: ಸಭೆಗೆ ಹಾಜರಾಗಿದ್ದವರ ವಿವರಗಳು ::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಸ್.ಬಸವರಾಜು. ಭಾ.ಆ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ಈ.ಈರಣ್ಣ. | ಸದಸ್ಯ ಕಾರ್ಯದರ್ಶಿ ವಾಡ್ ನಂ: 18 |
| 3. | ಶ್ರೀ. ನಾಗರಾಜ. | ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) |
| 4. | ಶ್ರೀ ಆನಂದ್. | ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ. |
| 5. | ಶ್ರೀಮತಿ ಮಮತ. | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ: 18 |
| 6. | ಶ್ರೀ. ವಿವೇಕ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ: 18 |

ಪ್ರಾರಂಭಿಕವಾಗಿ ಸಭೆಯನ್ನು ಉದ್ದೇಶಿಸಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್‌ನಲ್ಲಿರುವ ನಿವಾಸಿಗಳ ಕ್ಷೇಮಾಬಿವೃದ್ಧಿ ಸಂಘದವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರು, ಅಧಿಕಾರಿ ನೌಕರುಗಳು ಮತ್ತು ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಸೇರಿ ಸ್ವ-ಪರಿಚಯ ಮಾಡಿಕೊಳ್ಳಲಾಯಿತು.

ವಾರ್ಡಿನ ಅಧ್ಯಕ್ಷರು ಮಾತನಾಡುತ್ತಾ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ಹಾಗೂ ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಯಿತು.

- ಅಶ್ವಥ್ ನಗರದ ನಿವಾಸಿಗಳು ಬಡಾವಣೆಯಲ್ಲಿನ ಸಮಸ್ಯೆಗಳಾದ ಕಸ ವಿಲೇವಾರಿ, ರಸ್ತೆ ದುರಸ್ಥಿ, ವಾಹನ ನಿಲುಗಡೆ ಬೋರ್ಡ್ ಹಾಗೂ ಬೀದಿ ದೀಪಗಳ ಬಗ್ಗೆ ಪ್ರಸ್ತಾಪಿಸಿದಾಗ ಸಭೆಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:09-01-2021 ರಂದು ಬೆಳಿಗ್ಗೆ ಸಮಯ 9.00 ಗಂಟೆಗೆ ಪರಿವೀಕ್ಷಣೆ ನಡೆಸಿ ಬಡಾವಣೆಯ ಕುಂದು ಕೊರತೆಗಳ ಬಗ್ಗೆ ಚರ್ಚಿಸಲಾಗುವುದೆಂದು ತಿಳಿಸಿದರು.
- ವಾಜಪೇಯಿ ಉದ್ಯಾನವನದ ಬಳಿ ಸಂಗ್ರಹಣೆಯಾಗುವ ಕಸವನ್ನು ವಿಲೇವಾರಿ ಮಾಡಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ವಿವೇಕ್ ರವರಿಗೆ ಸೂಚಿಸಿದರು.
- ಇಸ್ರೋ ಬಳಿ ಇರುವ ಉದ್ಯಾನವನಕ್ಕೆ ಹಾಗೂ ಗೆದ್ದಲಹಳ್ಳಿಯ 60 ಅಡಿ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗುತ್ತಿಗೆದಾರರಿಗೆ ಹಾಗೂ ವಿದ್ಯುತ್ ಇಂಜಿನಿಯರ್ ಶ್ರೀ ಆನಂದ್‌ರವರಿಗೆ ಸೂಚಿಸಲಾಯಿತು.

- 4ನೇ ಮುಖ್ಯರಸ್ತೆಯಲ್ಲಿ ಇರುವ ಬೃಹತ್ ಮಳೆ ನೀರುಗಾಲುವೆಯ ಬಳಿ ನಿಲ್ಲಿಸಿರುವ ಜಂಕ್ ಆಟೋಗಳನ್ನು ಕೂಡಲೇ ತೆರವುಗೊಳಿಸಲು 3ನೇ ಬಾರಿಗೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
- ಹೆಚ್.ಐ.ಜಿ ಕಾಲೋನಿಯಲ್ಲಿ ಬರುವ ಮೊದಲನೆ ಮುಖ್ಯರಸ್ತೆಯಲ್ಲಿ ಪ್ರಗತಿಯಲ್ಲಿರುವ ಪಾದಾಚಾರಿ ಮಾರ್ಗದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಸಿದರು.
- ಬಿ.ಇ.ಎಲ್ ರಸ್ತೆಯಲ್ಲಿ ಒಳ ಚರಂಡಿ ಸಂಪರ್ಕ ಕಲ್ಪಿಸಲು ಅಗೆದಿರುವ ರಸ್ತೆಯನ್ನು ಕೂಡಲೇ ದುರಸ್ಥಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಾದ ಶ್ರೀ.ಕನಕರಾಜು ರವರಿಗೆ ದೂರವಾಣಿ ಮುಖಾಂತರ ಸೂಚಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.